# ಆಹಾ ಸುದ್ದಿ!

★ ಸಸಿತೋಟ




ನ್ಯೂಯಾರ್ಕ್‌ನಲ್ಲಿ ಏರ್ಪಡಿಸಲಾದ ಟಾಯ್ಲೆಟ್ ಪೇಪರ್ ಮದುವೆ ಉಡುಪು ವಿನ್ಯಾಸದ ಸ್ಪರ್ಧೆಯಿದು. ಶೌಚಾಲಯದಲ್ಲಿ ಬಳಸುವ ಒರೆಸು ಕಾಗದ ಕತ್ತರಿಸಿ ಅಂಟು, ಟೇಪು, ದಾರ ಬಳಸಿ ವಿನ್ಯಾಸ ಮಾಡಿದವುಗಳನ್ನು ರೂಪದರ್ಶಿಗಳು ಪ್ರದರ್ಶಿಸಿದರು. ಕಾಗದದಲ್ಲಿ ಹೊಸತರ ಜೊತೆ ಹಳತೂ ಸೇರಿತ್ತಂತೆ. ಶೌಚಾಲಯದ ಕಾಗದಗಳೆಲ್ಲ ಹೀಗೆ ಉಡುಪಾಗಿ ಕೂತರೆ ಶೌಚಾಲಯದಲ್ಲಿ ಉಡುಪುಗಳನ್ನು ಬಳಸಬೇಕೆ ಎಂದು ಯಾರೂ ಕೇಳಿದ ಹಾಗಿಲ್ಲ.

ಕ್ಯಾಲಿಫೋರ್ನಿಯಾದ ಸ್ಯಾನ್ ಮಾರಿನೋದ ಮೇಯರ್ ಡೆನ್ನಿಸ್ ನೆರೆಮನೆಯವನ ಗೇಟಿನೊಳಗೆ ನಾಯಿಯ ಮಲವನ್ನು ಎಸೆದು ಹೆಸರು ಮಾಡಿದ್ದಾನಂತೆ. ಸಮೀಪದಲ್ಲಿ ನಾಯಿ ಪಾರ್ಕ್ ಮಾಡಬಾರದು ಎಂದು ನೆರೆಮನೆಯ ನಿವಾಸಿ ಪ್ರತಿಭಟನೆ ನಡೆಸಿದ್ದಕ್ಕೆ ಪ್ರತೀಕಾರ ಮಾಡಲು ಹೋದ ಮೇಯರ್ ಸಿಸಿ ಟೀವಿಯಲ್ಲಿ ಸಿಕ್ಕಿಬಿದ್ದಿದ್ದಾನಂತೆ. ಈಗ ಪ್ರಕರಣ ಕೋರ್ಟ್ ಮೆಟ್ಟಿಲೇರಿದೆ. ಆದರೆ ಮೇಯರ್ ಬಳಿ ನಾಯಿ ಇಲ್ಲ. ಹಾಗಾದರೆ ನಾಯಿಯ ಹೇಸಿಗೆಯನ್ನು ಎಲ್ಲಿಂದ ತಂದ ಎಂದು ಚರ್ಚೆ ನಡೆಯುತ್ತಿದೆಯಂತೆ.



ಕಳೆದ ವಿಶ್ವ ಕಪ್ ಫುಟ್‌ಬಾಲ್ ಪಂದ್ಯಾವಳಿಯಲ್ಲಿ ವಿಜೇತ ತಂಡ ಯಾವುದು ಎಂದು ಭವಿಷ್ಯ ನುಡಿಯುತ್ತಿದ್ದ ಅಕ್ಟೋಪಸ್ ನೆನಪಿದೆಯೇ? ಈಗ ಚೀನಾದಲ್ಲಿ ಪಾಂಡಾ ಯಿಂಗ್ ಮೀ ಭವಿಷ್ಯ ಹೇಳಲು ಹೊರಟಿದೆ. ಆಹಾರವಿಟ್ಟ ಪೆಟ್ಟಿಗೆ ಮೇಲೆ ತಂಡಗಳ ಹೆಸರು ಬರೆದು ಪಾಂಡಾ ಯಾವುದನ್ನು ಆಯ್ದುಕೊಂಡು ತಿನ್ನುತ್ತದೋ ಅದೇ ತಂಡ ವಿಜೇತ ಎಂದು ಕುಣಿದಾಡುತ್ತಾರಂತೆ. ಎಲ್ಲಾ ಪೆಟ್ಟಿಗೆಗಳಲ್ಲೂ ಒಂದೇ ತರಹದ ತಿನಿಸು ಇದ್ದರೆ ಅಡ್ಡಿಯಿಲ್ಲ, ಇಲ್ಲದಿದ್ದರೆ ಬೆಟ್ ಕಟ್ಟಿದವರು ಮೋಸದಾಟ ಎಂದು ಪಾಂಡಾವನ್ನು ಹುಡುಕಿಕೊಂಡು ಬರಬೇಕಾಗುತ್ತದೆ.

ನ್ಯೂಯಾರ್ಕ್‌ನ ಕಂಪೆನಿಯೊಂದು ತನ್ನ ನೌಕರರಿಗೆ ಉದ್ಯೋಗ ನೀಡಿದ್ದಕ್ಕೆ ನಿತ್ಯ ದೇವರಿಗೆ ಕೃತಜ್ಞತೆ ಸಲ್ಲಿಸಿ, ಮ್ಯಾನೇಜರ್‌ಗೆ 'ಐ ಲವ್ ಯೂ' ಎಂದು ಹೇಳುವಂತೆ ಒತ್ತಾಯಿಸಿ ಈಗ ತನಿಖೆ ಎದುರಿಸುತ್ತಿದೆಯಂತೆ. ದೂರು ಕೊಟ್ಟವರು ಯಾರೆಂದರೆ ಮಹಿಳಾ ಉದ್ಯೋಗಿಗಳು. ಪುರುಷ ಉದ್ಯೋಗಿಗಳೇನೋ ಸಲೀಸಾಗಿ ಮ್ಯಾನೇಜರ್‌ಗೆ 'ಐ ಲವ್ ಯೂ' ಎಂದು ಹೇಳುತ್ತಿದ್ದರಂತೆ. ಯಾಕೆಂದರೆ ಅಲ್ಲಿ ಮ್ಯಾನೇಜರ್ ಆಗಿ ಕೆಲಸ ಮಾಡುತ್ತಿರುವವಳು ಒಬ್ಬಳು ಸುಂದರ ಯುವತಿ.



ಪ್ಯಾರಿಸ್‌ನಲ್ಲಿ 'ಡೈನರ್ಸ್ ಇನ್ ವೈಟ್' ಎಂಬ ಔತಣಕೂಟ ನಡೆಯುತ್ತದೆ. ಸಾಮಾಜಿಕ ಜಾಲತಾಣದ ಮೂಲಕ ಸ್ಥಳ, ದಿನ ತಿಳಿಸುತ್ತಾರಂತೆ. ಯಾರು ಬೇಕಾದರೂ ಬಿಳಿ ಉಡುಪು ತೊಟ್ಟು, ಬಿಳಿ ಮೇಜುಹಾಸು, ಬಿಳಿ ಡಿನ್ನರ್ ಸೆಟ್ ಸಮೇತ ಹಾಜರಾದರೆ ಸಾಕಂತೆ. ಆದರೆ ತಿನಿಸುಗಳೂ ಬಿಳಿ ಬಣ್ಣದ ಬ್ರೆಡ್ ಮೊದಲಾದವೇ ಅಥವಾ ರಂಗುರಂಗಿನಲ್ಲಿ ಲಭ್ಯವೇ ಎಂಬುದು ಗೊತ್ತಾಗಿಲ್ಲ.



ಕೆನಡಾದ ವ್ಯಾಂಕೋವರ್‌ನಲ್ಲಿ ಕಲಾವಿದ ಡಗ್ಲಾಸ್ ಎಂಬಾತ ರಾಳ ಮತ್ತು ಪಾಲಿಯೆಸ್ಟರ್‌ನಿಂದ ತಯಾರಿಸಿದ ಮುಖದ ಮಾದರಿಯನ್ನು ಗ್ಯಾಲರಿ ಹೊರಗೆ ಇಟ್ಟ. ಹೋಗಿ ಬರುವ ಜನರಿಗೆ ಅಗಿದ ಚ್ಯೂಯಿಂಗ್ ಗಮ್ ಅಂಟಿಸುವಂತೆ ಕೇಳಿಕೊಂಡ. ನಂತರ ಅದಕ್ಕೆ 'ಗಮ್ ಹೆಡ್' ಎಂದು ಹೆಸರಿಟ್ಟು ಗ್ಯಾಲರಿ ಒಳಗೆ ಪ್ರದರ್ಶನಕ್ಕೆ ಇಟ್ಟನಂತೆ. ನಿಜವಾದ ಕಲಾವಿದನ ಸೃಜನಶೀಲತೆ ಎಂದರೆ ಇದೇ ಇರಬಹುದು.